ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ವಿಶೇಷ ಘಟಕ ಯೋಜನೆಯಡಿಯಲ್ಲಿ ಕೆಳಕಂಡ ಗ್ರಾಮಗಳಲ್ಲಿ ತಲಾ ೫೫,೦೦೦ ರೂ.ಗಳ ಅಂದಾಜಿನಲ್ಲಿ ೨೦ ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

	ಗ್ರಾಮ	ಕೊಳವೆ ಬಾವಿಗಳ ಸಂಖ್ಯೆ
(೧)	ಹಿರೇನಂದಿ	೩
(೨)	ಅಚ್ಚಿನ ಕಟ್ಟೆ	೦
(೩)	ಗಂಜೆನಾಳ	೦
(೪)	ನಾಗನೂರು	೦
(೫)	ಕಾಚಿಲಗಿ	೦
(೬)	ಕುಲಕೋಡ	೦
(೭)	ಮಮದಾಪುರ	೨
(೮)	ಶಿವಾಪುರ (ಎಸ್)	೨
(೯)	ಯಾದವಾಡ	೨
(೧೦)	ಶಿವಾಪುರ (ಕೊನ್ನೂರ)	೦
(೧೧)	ದುಪದಾಳ	೦
(೧೨)	ಕಲ್ಲಳ್ಳಿ	೦
(೧೩)	ಬಿಗರನಾಳ	೦
(೧೪)	ತಳಕಟ್ನಾಳ	೦
(೧೫)	ದಂಡಾಪುರ	೦

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳನ್ನು ಅಭಿವೃದ್ಧಿಗೊಳಿಸುವುದು

೬೪೫ (ಈ) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು, ಉತ್ತರಿಸುವರೇ ?

(ಅ) ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ನಷ್ಟದಲ್ಲಿರುವ ಗಿರಣಿಗಳು ಎಷ್ಟು ?

(ಇ) ಅವುಗಳನ್ನು ಸುಧಾರಿಸಲು ಸರಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಕರ್ನಾಟಕದಲ್ಲಿ ಏಳು ಸಹಕಾರಿ ನೂಲಿನ ಗಿರಣಿಗಳು ಕೆಲಸ ಮಾಡುತ್ತಿವೆ.

(ಆ) ಕೆಲಸ ಮಾಡುತ್ತಿರುವ ೭ ಗಿರಣಿಗಳಲ್ಲಿ ೬ ಗಿರಣಿಗಳು ನಷ್ಟದಲ್ಲಿರುತ್ತವೆ.

(ಇ) ೧) ಗಿರಣಿಗಳಿಗೆ ಬೇಕಾಗುವ ಕಚ್ಚಾ ಪದಾರ್ಥವನ್ನು ಕೊಳ್ಳಲು ಬಂಡವಾಳವನ್ನು ಇದುವರೆವಿಗೆ ಶೇ. ೧೭½ರಂತೆ ಬಡ್ಡಿ ಪಾವತಿ ಮಾಡುತ್ತಿದ್ದು, ಗಿರಣಿಗಳಿಗೆ ನೆರವಾಗುವಂತೆ ಸಬಾರ್ಡಿನಿಂದ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಸಾಲ ಪಡೆದು ಶೇ. ೧೫½ ಬಡ್ಡಿಯನ್ನು ವಿಧಿಸಲು ಶಿಫಾರಸ್ಸು ಮಾಡಲಾಗಿದೆ.

೨) ಗಿರಣಿಗಳಿಗೆ ಅವಶ್ಯಕವಾದ ಹತ್ತಿಯನ್ನು ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳವನ್ನು ಏಕೈಕ ಪ್ರತಿನಿಧಿಯಾಗಿ ರಾಜ್ಯ ಸರ್ಕಾರವು ನೇಮಿಸಿರುತ್ತದೆ.

೩) ಆರ್ಥಿಕವಾಗಿ ದುರ್ಬಲವಾಗಿರುವ ಗಿರಣಿಗಳಿಗೆ ರಾಜ್ಯ ಸರ್ಕಾರವು 'ಮಾರ್ಜಿನ್ ಮನಿ'ಯ ದುಡಿಯಂವ ಬಂಡವಾಳ ಒದಗಿಸಲು ರಾಜ್ಯ ಸರ್ಕಾರವು ಸಕ್ರಿಯವಾಗಿ ನೆರವು ನೀಡುತ್ತಿದೆ.

ಳ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬೇಕಾಗುವ ನೂಲನ್ನು ಸಹಕಾರಿ ಗಿರಣಿಗಳಿಂದಲೇ ಕೊಳ್ಳಬೇಕೆಂದು ಕೋರಲಾಗಿದೆ.

ಶ) ಗಿರಣಿಗಳ ಸಾಲದ ಮರುಪಾವತಿಯನ್ನು ಪುನರ್ ನಿರ್ಧರಿಸಲು ಶಿಫಾರಸ್ಸು ಮಾಡಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ರಾಣಿಬೆನ್ನೂರು ಕಂದಾಯ ವೃತ್ತದಲ್ಲಿ ವಿಧವಾ ಮಾಸಾಶನಗಳು

೬೬೦ ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು).— ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣಿಬೆನ್ನೂರು ಕಂದಾಯ ವೃತ್ತದಲ್ಲಿ ವಿಧವಾ ಮಾಸಾಶನವನ್ನು ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ? ಮತ್ತು ಅವರುಗಳ ಹೆಸರು ಹಾಗೂ ಸಂಬಂಧಿಸಿದ ಗ್ರಾಮಗಳು?

ಆ) ಅವರುಗಳಲ್ಲಿ ಯೋಗ್ಯ ರೀತಿಯಲ್ಲಿ ವಿಧವಾ ಮಾಸಾಶನವನ್ನು ಪಡೆಯಲು ಅರ್ಹರಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಯೋಜನಾ, ಕಾರ್ಮಿಕ ಮತ್ತು ಕಂದಾಯ ಮಂತ್ರಿ).—

ಅ) ರಾಣಿಬೆನ್ನೂರು ಕಂದಾಯ ವೃತ್ತದಲ್ಲಿ ವಿಧವಾ ಮಾಸಾಶನವನ್ನು ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ೧೧೮೭. ಫಲಾನುಭವಿಗಳ ಹೆಸರು ಮತ್ತು ಸಂಬಂಧಿಸಿದ ಗ್ರಾಮಗಳನ್ನು ಅನುಬಂಧ–೧ರಲ್ಲಿ ಸೂಚಿಸಲಾಗಿದೆ.

ಆ) ಸದರಿಯವರುಗಳಿಲ್ಲರೂ ಸಹ ಯೋಗ್ಯ ರೀತಿಯಲ್ಲಿ ವಿಧವಾ ಮಾಸಾಶನವನ್ನು ಪಡೆಯಲು ಅರ್ಹರಾಗಿದ್ದಾರೆ. ಅನರ್ಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಪುನರ್ ಪರಿಶೀಲಿಸಲಾಗುವುದು.

ಅನುಬಂಧ—೧

ರಾಣಿಬೆನ್ನೂರು ತಾಲೂಕು ರಾಣಿಬೆನ್ನೂರು ಹೋಬಳಿಯಲ್ಲಿ ವಿಧವಾ ವೇತನ ಪಡೆಯುತ್ತಿರುವವರ ಯಾದಿ.

ಸಂಖ್ಯೆ	ವೇತನದಾರರ ಹೆಸರು	ಆದೇಶ ಸಂಖ್ಯೆ	ಷರಾ
೧.	ಶ್ರೀಮತಿ ನಾಗವ್ವ, ರಂಗಪ್ಪ ಸಾಲೆಗೇರ		
೨.	ಮಹಬೂಬ ಫಕ್ಕೀರಸಾಬ ಹಿರೇಬಿದ್ರಿ		
೩.	ಬಸವ್ವ ರಾಮಪ್ಪ ಮಂಧೋಳಕರ		
೪.	ಅನಸೂಯಾ ದ್ಯಾಮಲಿಂಗಪ್ಪ ಶ್ಯಾಗಲಿ		
೫.	ದೇವಿರವ್ವ ಗೋವಿಂದಪ್ಪ ಶ್ಯಾವಿ	...	...
೬.	ಸುಶಿಲವ್ವ ನಿಂಗಪ್ಪ ಹರಿಯಪ್ಪಳರ		
೭.	ಲಕ್ಷ್ಮವ್ವ ವಾಸಪ್ಪ ವಿಭೂತಿ		
೮.	ಗಿರಿಜವ್ವ ಸಣ್ಣಬಸಪ್ಪ ಬರಲಿಕಟ್ಟಿ		
೯.	ಮೈಮನಬಜವಾಸಾವ ಮೆಡ್ಲೇರಿ		